# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಸ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ : 336

ಉತ್ತರಿಸಬೇಕಾದ ದಿನಾಂಕ : 06.03.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ದೇಸಿ ಗೋವುಗಳ ರಕ್ಷಣೆ ಮತ್ತು ಅವುಗಳ ತಳಿ ಅಭಿವೃದ್ಧಿಗೆ ಸಂಬಂಧಿಸಿದಂತೆ, ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. | ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ರಾಜ್ಯದ ಗೋತಳಿಗಳ ಸಂವರ್ಧನೆ ಹಾಗೂ ಸಂರಕ್ಷಣೆಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>1)ರಾಜ್ಯದಲ್ಲಿ ಜಾನುವಾರು ತಳಿ ಸಂವರ್ಧನೆಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ದನ ಮತ್ತು ಎಮ್ಮೆ ತಳಿ ಸಂವರ್ಧನೆ ನೀತಿಯನ್ನು 2015ರಲ್ಲಿ ರೂಪಿಸಲಾಗಿದ್ದು, ಅದರಂತೆ ದೇಸಿ ತಳಿಯ ಜಾನುವಾರುಗಳ ಸಂವರ್ಧನೆಯನ್ನು ಶುದ್ಧ ದೇಶಿ ತಳಿ ವೀರ್ಯನಳಿಕೆಗಳಿಂದ ಕೃತಕಗರ್ಭಧಾರಣೆ ಕಾರ್ಯಕ್ರಮದ ಮೂಲಕ ಕೈಗೊಳ್ಳಲಾಗುತ್ತಿದೆ. 2019-20ನೇ ಸಾಲಿನಲ್ಲಿ ಫೆಬ್ರವರಿ 2020ರವರೆಗೆ ರಾಜ್ಯಾದಂತ 3,19,613 ದೇಶಿ ತಳಿ ರಾಸುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗಿದೆ.<br>2) ರಾಜ್ಯದ ದೇಸಿ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಈ ಕೆಳಕಂಡಂತೆ ಶುದ್ಧ ತಳಿ ಮಾತೃ ಹೋರಿ ತಳಿ ಸಂವರ್ಧನಾ ಕ್ಷೇತ್ರಗಳನ್ನು ಸ್ಥಾಪಿಸಿ ನಿರ್ವಹಿಸಲಾಗುತ್ತಿದೆ. |

| ಕ್ರ.ಸಂ. | ತಳಿ | ಸ್ಥಳ | ಜಿಲ್ಲೆ |
|---|---|---|---|
| 1 | ಹಳ್ಳಿಕಾರ್ | ಕುಣಿಕೇನ ಹಳ್ಳಿ | ತುಮಕೂರು |
| 2 | ಅಮೃತ್ ಮಹಲ್ | 1) ಅಜ್ಜಂಪುರ<br>2) ಲಿಂಗದಹಳ್ಳಿ<br>(ಗೋಕುಲಗ್ರಾಮ) | ಚಿಕ್ಕಮಗಳೂರು |
| 3 | ಕೃಷ್ಣ ವ್ಯಾಲಿ | ಮುನಿರಾಬಾದ್ | ಕೊಪ್ಪಳ |
| 4 | ಖಿಲಾರ್ | [illegible] | ಧಾರವಾಡ |
| 5 | ಮಲೆನಾಡುಗಿಡ್ಡ | ಕೊಯಿಲಾ | ದಕ್ಷಿಣ ಕನ್ನಡ |

3) ರಾಷ್ಟ್ರೀಯ ಹವಾಮಾನ ವೈಪರೀತ್ಯ ಸಂಬಂಧ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಅನುದಾನದೊಂದಿಗೆ ಸ್ಥಳೀಯ ಉತ್ತಮ ತಳಿ ಹಳ್ಳಿಕಾರ್, ಮಲೆನಾಡುಗಿಡ್ಡ ಮತ್ತು ಅಮೃತ್‌ಮಹಲ್ ಹಸುಗಳ ತಳಿ ಉತ್ಪಾದನಾ ಸಾಮರ್ಥ್ಯಗಳನ್ನು ಮಾಪನೆ ಮಾಡಿ, ಅರ್ಹ ರಾಸುಗಳನ್ನು ರೈತರಿಂದ ಖರೀದಿಸಿ ಅವುಗಳನ್ನು ಆಯಾ ಇಲಾಖಾ ಕ್ಷೇತ್ರಗಳಲ್ಲಿ ತಳಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.

4) ಕೇಂದ್ರ ಸರ್ಕಾರದ ಅನುದಾನದಲ್ಲಿ ರಾಷ್ಟ್ರೀಯ ಗೋಕುಲ ಗ್ರಾಮ ಕಾರ್ಯಕ್ರಮದಡಿ ಅಮೃತ್‌ಮಹಲ್ ತಳಿ ರಕ್ಷಣೆ ಮತ್ತು ಸಂರಕ್ಷಣೆಗಾಗಿ ಎಲ್.ಬಿ.ಟಿ.ಸಿ ಲಿಂಗದಹಳ್ಳಿಯಲ್ಲಿ ವಿಶೇಷ ಸಂರಕ್ಷಣಾ ಕೇಂದ್ರ ಪ್ರಾರಂಭಗೊಂಡಿದ್ದು, ಮೂಲಭೂತ ಸೌಕರ್ಯಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

| | | |
|---|---|---|
| ಆ | ಜಾನುವಾರುಗಳ ಅಕ್ರಮ ಸಾಗಾಟ ಮತ್ತು ಅನಧಿಕೃತ ಕಸಾಯಿಖಾನೆಗಳಲ್ಲಿ ಗೋವುಗಳನ್ನು ಮಾಂಸಕ್ಕಾಗಿ ಹತ್ಯೆ ಮಾಡುತ್ತಿರುವುದರಿಂದ ರಾಜ್ಯದಲ್ಲಿ ಗೋವುಗಳ ಪ್ರಮಾಣ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ರಾಜ್ಯದಲ್ಲಿರುವ ಕಸಾಯಿಖಾನೆಗಳು ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿದ್ದು, ಅನಧಿಕೃತ ಗೋಹತ್ಯೆ ತಡೆಯುವಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಸದ್ಯ ನಿಯಂತ್ರಣದಲ್ಲಿರುತ್ತದೆ. |
| ಇ | ಅಕ್ರಮವಾಗಿ ಗೋವುಗಳ ಸಾಗಾಟ ಮತ್ತು ಹತ್ಯೆಯನ್ನು ನಿಲ್ಲಿಸಲು ಗೋವುಗಳ ಸಂರಕ್ಷಣಾ ಕಾನೂನನ್ನು ರಚಿಸುವ ಬಗ್ಗೆ ಸರ್ಕಾರದ ನಿಲುವೇನು; ಗೋವುಗಳ ಸಂರಕ್ಷಣಾ ಕಾನೂನನ್ನು ಯಾವಾಗ ರಚಿಸಲಾಗುವುದು ಮತ್ತು ಜಾರಿಗೆ ತರಲಾಗುವುದು ಯಾವಾಗ? | The Karnataka Prevention of Cow Slaughter and Cattle Preservation Act 1964 ರಾಜ್ಯದಲ್ಲಿ ರಚನೆ ಜಾರಿಯಲ್ಲಿರುತ್ತದೆ.<br><br>ಉದ್ಭವಿಸುವುದಿಲ್ಲ. |

**ಪಸಂಮೀ ಇ-101 ಸಲೆವಿ 2020**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,